**ಅಸಲ ದಾವಾ ನಂ.212/2022**
**ಪಿಡಬ್ಲ್ಯೂ:01**

**ದಿನಾಂಕ: 21.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ವಕೀಲರಿಂದ**

1) ಭೀಮು ಲಮಾಣಿ ನನ್ನ ತಂದೆ ಎಂದರೆ ಸರಿ. ಅವರಿಗೆ ನಾವು 6 ಜನ ಮಕ್ಕಳು ಇರುತ್ತೇವೆ. ದಾವಾಸ್ತಿಗಳು ನನ್ನ ತಂದೆಗೆ ಹಿರಿಯರಿಂದ ಬಂದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ತಾಯಿ ಇಬ್ಬರು ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾಸ್ತಿಗಳಲ್ಲಿ ನಾವು 6 ಜನ ಸಾಮೂಹಿಕ ಕಬ್ಜಾವಹಿವಾಟಿಯಲ್ಲಿ ಇದ್ದು 2 ನೇ ಪ್ರತಿವಾದಿಗೂ ಸಹ ಸಮಪಾಲು ಇರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ನಮ್ಮ ತಂದೆಯನ್ನು ಕರೆದುಕೊಂಡು ಹೋಗಿ 3 ನೇ ಪ್ರತಿವಾದಿಗೆ ಖರೀದಿ ಹಾಕಿಕೊಟ್ಟಿರುತ್ತಾರೆ ಅಂತಾ ಖೊಟ್ಟಿಯಾಗಿ ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಹೆಸರಿಗೆ ಮಾಡಿದ ಖರೀದಿ ಪತ್ರದಲ್ಲಿ 2 ನೇ ಪ್ರತಿವಾದಿಯ ಯಾವುದೇ ಹಸ್ತಕ್ಷೇಪ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ವಕೀಲರಿಂದ**

1) ವಾದ ಪತ್ರದಲ್ಲಿ ಬರೆದ ವಿಷಯ ಮಾಹಿತಿ ಇರುತ್ತದೆ. ಈ ದಾವೆಯನ್ನು ಪಾಲುವಾಟ್ನಿ ಕೋರಿ ದಾಖಲಿಸಿರುತ್ತೇನೆ. ದಾವಾಸ್ತಿಗಳ ಸರ್ವೆ ನಂ.269/2,269/1 ಮತ್ತು 256/7 ಅಂತಾ ಇರುತ್ತದೆ. ದಾವಾಸ್ತಿಗಳು ಮುಂಚೆ ನಮ್ಮ ತಂದೆ ಹೆಸರಿಗೆ ಖಾತೆ ಇದ್ದವು. ದಾವಾಸ್ತಿಗಳು ನಮ್ಮ ಕುಟುಂಬಕ್ಕೆ ನಮ್ಮ ಮುತ್ತಜ್ಜರವರಿಂದ ಬಂದಿರುತ್ತದೆ. ದಾವಾಸ್ತಿ ಅನು ಕ್ರಮ ನಂ.3 3 ನೇ ಪ್ರತಿವಾದಿಯ ಹೆಸರಿಗೆ ಖಾತೆ ಇರುತ್ತದೆ. 3 ನೇ ಪ್ರತಿವಾದಿ ದಾವಾಸ್ತಿ ಅನು ಕ್ರಮ.ನಂ.3 ನ್ನು ಖೊಟ್ಟಿ ಖರೀದಿ ಪತ್ರ ಸೃಷ್ಟಿಸಿಕೊಂಡು ಮಾಡಿರುತ್ತಾರೆ. ನನ್ನ ತಂದೆ ಜೀವೀತ ಕಾಲದಲ್ಲಿ ದಾವಾಸ್ತಿ ಆಸ್ತಿ ಮಾರಾಟ ಮಾಡಿದ ಕುರಿತು ನನಗೆ ಮಾಹಿತಿ ಇಲ್ಲ. 3 ನೇ ಪ್ರತಿವಾದಿ ಮಾಡಿಕೊಂಡು ಖರೀದಿ ಪತ್ರಕ್ಕೆ ನನ್ನದು ಆಗಲಿ 1 ನೇ ಪ್ರತಿವಾದಿಯಾಗಲಿ ಸಹಿ ಇರುವುದಿಲ್ಲ. ದಾವಾಸ್ತಿಗಳಲ್ಲಿ 1 ನೇ

ಪ್ರತಿವಾದಿಗೂ ಸಹ ಸಮಪಾಲು ಇರುತ್ತದೆ ಎಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ ನನಗಾಗಲಿ ನನ್ನ ಈತರ ಸಹೋದರ ಸಹೋದರಿಯರ ನಡುವೆ ಯಾವುದೇ ಪಾಲುವಾಟ್ನಿಯಾಗಿರುವುದಿಲ್ಲ.

**3 ನೇ ಪ್ರತಿವಾದಿ ವಕೀಲರು ಕಾಲವಕಾಶ ಕೇಳಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.